ಸಂಪುಟ : 40 ಸಂಚಿಕೆ:340 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 08 ಜನವರಿ 2018 ಸೋಮವಾರ POST REG NO . L-2/RNP- 364/TMR/2015-17 ಪುಟಗಳು :10 ಬೆಲೆ ₹ 2.50

ತುಮಕೂರು | Tumakuru

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್

ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
Web : prajapragathi.com



ದಕ್ಷಿಣ ಕನ್ನಡ ಕೋಮುವಾದದ ಪ್ರಯೋಗಾಲಯ ಆಗಬಾರದು : ಸಿಎಂ ಸಿದ್ದರಾಮಯ್ಯ

ವಿವರ : ಪುಟ 10

ಆಸಿಯಾನ್ ರಾಷ್ಟ್ರಗಳೊಡನೆ ತನ್ನ ಸಂಪರ್ಕ ವಿಸ್ತರಿಸಲು ಭಾರತ ಯೋಜಿಸಿದೆ: ಸುಷ್ಮಾಸ್ವರಾಜ್



ವಿವರ : ಪುಟ 10



ವಿಶ್ವವಿದ್ಯಾಲಯಗಳ ವೆಬ್‌ಸೈಟಲ್ಲಿ ಕನ್ನಡ ಬಳಕೆ ಕಡ್ಡಾಯ: ಎಸ್.ಜಿ.ಸಿದ್ದರಾಮಯ್ಯ

ವಿವರ : ಪುಟ 10

31,800 ಎಸ್.ಸಿ., ಎಸ್‌ಟಿ ವಿದ್ಯಾರ್ಥಿಗಳಿಗೆ ಉಚಿತ ಲ್ಯಾಪ್‌ಟಾಪ್: ಸಚಿವ ಬಸವರಾಜ್ ರಾಯರೆಡ್ಡಿ

ವಿವರ : ಪುಟ 10



Gold 916 ₹ 2785/–
Silver ₹ 41000/–
ಸೂರ ಜ್ಯುಯಲರ್ಸ್
Ashoka Road, Tumkur
Ph: 0816 4022274

ವೆಂಕೋಬ್ ಕೋಳಿ ಧಾರಣೆ
ಫಾರಂ ಕೋಳಿ 1 ಕೆಜಿಗೆ ರೂ.81 /-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 103/-

| ವಿತ್‌ಸ್ಕಿನ್ | ವಿತೌಟ್ ಸ್ಕಿನ್ |
|---|---|
| ರೂ.149 /- | ರೂ.170 /- |

ಡಜನ್ ಮೊಟ್ಟೆಗೆ ರೂ.54 /-

# ಶಾಲಾ ಕಾಲೇಜುಗಳ ನೆನಪು ಅವಿಸ್ಮರಣೀಯ

## ವಿಜ್ಞಾನ ಕಾಲೇಜಿನ ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಾರಂಭದಲ್ಲಿ ಗಣ್ಯರ ನುಡಿ

**ತುಮಕೂರು**

ತಂದೆ, ತಾಯಿ ನಮಗೆ ಜನ್ಮ ನೀಡಿದರೆ, ಬದುಕಂದ್ರೇನು, ಜೀವನಅಂದ್ರೇನು ಎಂಬುದನ್ನು ಕಲಿಸುವುದು ನಾವು ಓದಿದಂತಹ ಶಾಲಾ ಕಾಲೇಜು ಎಂದು ನಾನು ಯಾವುದೇ ಸಂಕೋಚವಿಲ್ಲದೆ ಹೆಮ್ಮೆಯಿಂದ ಹೇಳುತ್ತಿದ್ದೇನೆ ಎಂದು ಶಾಸಕರಾದ ಕೆ.ಎನ್ ರಾಜಣ್ಣನವರು ಹಳೆಯ ವಿದ್ಯಾರ್ಥಿಗಳ ಸ್ನೇಹ ಸಮ್ಮಿಲನ ಸಮಾರಂಭದಲ್ಲಿ ತಮ್ಮ ಮನದಾಳದ ಸವಿ ನೆನಪುಗಳನ್ನು ಹಂಚಿಕೊಂಡು ಅಭಿಪ್ರಾಯ ವ್ಯಕ್ತಪಡಿಸಿದರು.

ತುಮಕೂರು ವಿಶ್ವವಿದ್ಯಾನಿಲಯದ ಸರ್. ಎಂ.ವಿಶ್ವೇಶ್ವರಯ್ಯ ಸಂಭಾಂಗಣದಲ್ಲಿ ಸರ್ಕಾರಿ ವಿಜ್ಞಾನ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ ಏರ್ಪಡಿಸಿದ್ದ ಮೂರನೇ ವರ್ಷದ ವಾರ್ಷಿಕ ಸಮಾರಂಭದಲ್ಲಿ ಮಾತನಾಡಿದ, ಶಾಸಕರು, ಶಾಲಾ ಕಾಲೇಜುಗಳಲ್ಲಿನ ಪಾಠ, ಪಾಠ ಕಲಿಸುವ ಮೇಸ್ಟ್ರು, ಆ ದಿನಗಳ ಸಂತೋಷ, ತುಂಟಾಟ, ನೆಮ್ಮದಿ ಮತ್ತು ಸಮಾಜಪರ ಹಾಗೂ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ವಿದ್ಯಾರ್ಥಿಗಳೆಲ್ಲಾ ಒಂದಾಗಿ ಒಗ್ಗಟ್ಟಿನಿಂದ ಮಾಡುತ್ತಿದ್ದ, ಹೋರಾಟ ಇವೆಲ್ಲವನ್ನು ಒಮ್ಮೆ ನೆನಪಿಸಿಕೊಂಡರೆ, ಈಗ ನಮಗೆ ದೊರೆತಿರುವ ಅಧಿಕಾರ, ಹಣ, ಐಶ್ವರ್ಯ ಇದೆಲ್ಲದ್ದಕ್ಕಿಂತ ತುಂಬಾ ದೊಡ್ಡದಾದದ್ದು, ಆ ವಿದ್ಯಾರ್ಥಿ ದಿನಗಳನ್ನು ನೆನಪಿಸಿಕೊಂಡು ನನಗೆ ಸಂತೋಷವಾಯಿತು ಎಂದರು.



ತುಮಕೂರು ವಿಶ್ವವಿದ್ಯಾನಿಲಯದ ಸರ್.ಎಂ.ವಿಶ್ವೇಶ್ವರಯ್ಯ ಸಂಭಾಂಗಣದಲ್ಲಿ ಸರ್ಕಾರಿ ವಿಜ್ಞಾನ ಕಾಲೇಜು ಹಳೆಯ ವಿದ್ಯಾರ್ಥಿಗಳ ಸಂಘ ಏರ್ಪಡಿಸಿದ್ದ ಮೂರನೇ ವರ್ಷದ ವಾರ್ಷಿಕ ಸಮಾರಂಭದಲ್ಲಿ ಶಾಸಕ ಕೆ.ಎನ್.ರಾಜಣ್ಣ, ಎಸ್.ನಾಗಣ್ಣ ಇತರರಿದ್ದರು. ಸಾಧಕ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

> ನಮ್ಮ ನಾಡಿನಲ್ಲಿ ಕೆ.ಎನ್. ರಾಜಣ್ಣರಂತಹ ಐದು ಜನರಿದ್ದರೆ ಸಾಕು, ನಮ್ಮ ನಾಡು ಮತ್ತಷ್ಟು ಅಭಿವೃದ್ಧಿಯತ್ತ ಸಾಗುತ್ತದೆ ಎಂಬುದರಲ್ಲಿ ಯಾವುದೇ ಸಂಶಯವಿಲ್ಲ, ಹಿಂದೆ ನಾನು ಹಲವಾರು ಪಾಳೇಗಾರರನ್ನು ನೋಡಿದ್ದೇನೆ, ಆದರೆ ಈಗಿನ ನಿಜವಾದ ಪಾಳೇಗಾರ ಕೆ.ಎನ್.ರಾಜಣ್ಣ ಎಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಹಳೆಯ ವಿದ್ಯಾರ್ಥಿಗಳು ಎಂದ ಮಾತ್ರಕ್ಕೆ ನಮಗೆ ವಯಸ್ಸಾಗಿಲ್ಲ, ಮರಳಿ ಅರಳುವ ಭಾವ ಹೊಂದಿದಾಗ ಮಾತ್ರ ನಾವು ನಮ್ಮ ಕಾಲೇಜಿನ ಅಭಿವೃದ್ಧಿ ಹಾಗೂ ವಿದ್ಯಾರ್ಥಿಗಳ ಏಳಿಗೆಗೆ ಸಹಕಾರ ನೀಡಲು ಸಾಧ್ಯವಾಗುತ್ತದೆ ಎಂದು ಪ್ರಜಾ ಪ್ರಗತಿ ಸಂಪಾದಕರಾದ ಎಸ್.ನಾಗಣ್ಣ ತಿಳಿಸಿದರು.

ಆ ಹೊತ್ತಿನ ಮೇಷ್ಟ್ರುಗಳು ನಮಗೆ ದೇವರ ಸಮಾನರಾಗಿದ್ದರು. ವಿದ್ಯಾರ್ಥಿ ಮತ್ತು ಅವರ ನಡುವಿನ ಆತ್ಮೀಯ ಸಂಬಂಧ ಹೇಳತೀರದು. ಮತ್ತೊಂದು ಜನ್ಮ ಇದ್ದರೆ ಅಂತಹ ಮೇಸ್ಟ್ರುಗಳಿಂದ ಪಾಠ ಕಲಿಯುವಂತಹ ಅವಕಾಶ ನೀಡುವಂತೆ ನಾನು ಆ ದೇವರಲ್ಲಿ ಪ್ರಾರ್ಥಿಸಿಕೊಳ್ಳುತ್ತೇನೆ ಎಂದರು. ಆ ಹೊತ್ತಿನ ವಿದ್ಯಾರ್ಥಿಗಳು, ಮೇಷ್ಟ್ರುಗಳು, ತಂದೆ ತಾಯಿ ಇವರುಗಳ ಬಾಂಧವ್ಯ >>> 7ನೇ ಪುಟಕ್ಕೆ

# ‘ಮಹಾಸಭಾ’ ಹೆಸರನ್ನೇ ಯಥಾವತ್ ಉಳಿಸಿಕೊಳ್ಳಲು ನಿರ್ಣಯ

**ಬೆಂಗಳೂರು**

‘ಅಖಿಲ ಭಾರತ ವೀರಶೈವ ಮಹಾಸಭಾ’ ಹೆಸರನ್ನೇ ಯಥಾವತ್ತಾಗಿ ಉಳಿಸಿಕೊಳ್ಳಲು ಮಹಾಸಭೆಯ ವಿಶೇಷ ಸರ್ವ ಸದಸ್ಯರ ಸಭೆ ತೀರ್ಮಾನಿಸಿದೆ.

ಅಖಿಲ ಭಾರತ ವೀರಶೈವ ಮಹಾಸಭಾ ಹೆಸರಿಗೆ ಲಿಂಗಾಯತ ಪದ ಸೇರ್ಪಡೆ ಮಾಡಬೇಕೆಂದು ಹಲ ದಶಕಗಳ ಕಾಲದಿಂದಲೂ ಕಿತ್ತಾಟ, ಹೋರಾಟ ನಡೆದುಕೊಂಡು ಬಂದಿದೆ. ಹೀಗಾಗಿ ಆಗಾಗ ಬದಲಾದ ಸನ್ನಿವೇಶದಲ್ಲಿ ಹೆಸರನ್ನು ಬದಲಾವಣೆ ಮಾಡಲಾಗಿತ್ತಾದರೂ, ಅಧಿಕೃತವಾಗಿ ‘ಬೈಲಾ’ದಲ್ಲಿ ಹೆಸರು ಬದಲಿಸಿರಲಿಲ್ಲ, ಹೀಗೆ ಆಗಾಗ ನಡೆದ ಕಿತ್ತಾಟಗಳಿಂದಾಗಿ ‘ವೀರಶೈವ-ಲಿಂಗಾಯತ’ ಎಂದು ಸೇರ್ಪಡೆ ಮಾಡಲಾಗಿತ್ತು. ಆದರೆ, ಅದು ಕಾನೂನುಬದ್ಧವಾಗಿರಲಿಲ್ಲ.

ಈ ಹಿನ್ನೆಲೆಯಲ್ಲಿ ವಿಶೇಷ ಸರ್ವಸದಸ್ಯರ ಸಭೆ ಕರೆಯಲಾಗಿತ್ತು. ಆದರೆ, ಸಭೆಯಲ್ಲಿ 113 ವರ್ಷಗಳಿಂದ ಇರುವ ಹೆಸರು ಬದಲಿಸಬಾರದು. ಹಾನಗಲ್ಲ ಕುಮಾರಸ್ವಾಮಿ ಅವರಿಟ್ಟ ಹೆಸರನ್ನು ಹಾಗೆಯೇ ಉಳಿಸಿಕೊಳ್ಳುವ ನಿರ್ಧಾರಕ್ಕೆ ಬರಲಾಗಿದೆ.

ತರಳಬಾಳು ಸಭಾಂಗಣದಲ್ಲಿ ನಡೆದ ವಿಶೇಷ ಮಹಾಸಭೆಯಲ್ಲಿ ಈ ತೀರ್ಮಾನಕ್ಕೆ ಬರಲಾಗಿದ್ದು, ಹಾಗೊಂದು ವೇಳೆ ಲಿಂಗಾಯತ ಪದವನ್ನು ಸೇರ್ಪಡೆ ಮಾಡಲೇಬೇಕು ಎಂಬ ಒತ್ತಾಯ ಕೇಳಿಬಂದಲ್ಲಿ ಅಧ್ಯಕ್ಷ ಶಾಮನೂರು ಶಂಕರಪ್ಪ ನೇತೃತ್ವದಲ್ಲಿ ರಚಿತವಾಗುವ ಸಮಿತಿ ಈ ಬಗ್ಗೆ ತೀರ್ಮಾನ ಕೈಗೊಳ್ಳಬಹುದು ಎಂದು ಸಭೆ ನಿರ್ಧರಿಸಿದೆ.

ಸಭೆಯಲ್ಲಿ ಮಾಜಿ ಸಚಿವ ಎಂ.ವಿ.ರಾಜಶೇಖರನ್, ಮಹಾಸಭಾ ಅಧ್ಯಕ್ಷ ಶಾಮನೂರು ಶಂಕರಪ್ಪ, ಹಿರಿಯರಾದ ಭೀಮಣ್ಣ ಖಂಡ್ರೆ, ಸಚಿವ ಈಶ್ವರ ಖಂಡ್ರೆ, ಕಾರ್ಯದರ್ಶಿ ಸಚ್ಚಿದಾನಂದಮೂರ್ತಿ ಸೇರಿದಂತೆ ಮೊದಲಾದ ಪ್ರಮುಖರು ಉಪಸ್ಥಿತರಿದ್ದರು.

‘ಲಿಂಗಾಯತ’ ಪದವನ್ನಿಟ್ಟುಕೊಂಡು ರಾಜಕೀಯ ಕಾರಣಕ್ಕಾಗಿ ಸಮುದಾಯವನ್ನು ಒಡೆಯಲೆತ್ನಿಸುತ್ತಿದ್ದಾರೆ. ಹೀಗಾಗಿ ಈ ಲಿಂಗಾಯತ ಪದ ಪ್ರಸ್ತಾವವೇ ಬೇಡ. ಹಾಗೊಮ್ಮೆ ಅನಿವಾರ್ಯ ಎನಿಸಿದಲ್ಲಿ ಶಾಮನೂರು ಶಂಕರಪ್ಪ ನೇತೃತ್ವದ ಸಮಿತಿ ತೀರ್ಮಾನಿಸಲಿದೆ.

# ನಿತೀಶ್‌ಗೆ ಥ್ಯಾಂಕ್ಸ್ ಹೇಳಿದ ಲಾಲೂ ಪುತ್ರ

**ಪಾಟ್ನಾ**

ತಮ್ಮ ತಂದೆ ಲಾಲೂ ಪ್ರಸಾದ್ ಯಾದವ್ ಅವರಿಗೆ ನ್ಯಾಯಾಲಯ ಜೈಲು ಶಿಕ್ಷೆ ವಿಧಿಸುತ್ತಿದ್ದಂತೆಯೇ ಪುತ್ರ ತೇಜಸ್ವಿ ಯಾದವ್ ಬಿಹಾರ ಸಿ.ಎಂ. ನಿತೀಶ್ ಕುಮಾರ್ ಅವರಿಗೆ ಥ್ಯಾಂಕ್ಸ್ ಹೇಳುವ ಮೂಲಕ ವ್ಯಂಗ್ಯವಾಡಿದ್ದಾರೆ. ಬಿಜೆಪಿಯ ಸರಳ ನಿಯಮವಾದ ನಮ್ಮನ್ನು ಅನುಸರಿಸಿ, ಇಲ್ಲದಿದ್ದರೆ ನಿಮಗೆ ಶಾಸ್ತಿ ಮಾಡುತ್ತೇವೆ ಎಂಬುದು ಯಥಾವತ್ತಾಗಿ ಈಗ ಅನುಷ್ಠಾನಗೊಂಡಿದೆ. ಒಂದು ವೇಳೆ ಬಿಜೆಪಿಯೊಂದಿಗೆ ರಾಜಿ ಮಾಡಿಕೊಂಡಿದ್ದರೆ ಜೈಲಿಗೆ ಹೋಗುತ್ತಿರಲಿಲ್ಲ ಎಂದಿದ್ದಾರೆ.

# ಆಧಾರ್ ಸೋರಿಕೆ ಎಫ್.ಐ.ಆರ್. ದಾಖಲು

**ನವದೆಹಲಿ**

ದೇಶದ ನಾಗರಿಕರ ಆಧಾರ್ ಮಾಹಿತಿ ಕೇವಲ 500 ರೂ. ಗಳಿಗೆ ಮಾರಾಟವಾಗುತ್ತಿರುವ ಕುರಿತು ತನಿಖಾ ವರದಿ ಪ್ರಕಟಿಸಿದ್ದ ‘ಟ್ರಿಬ್ಯೂನ್ ಪತ್ರಿಕೆ ವರದಿಗಾರ್ತಿ ವಿರುದ್ಧ ಎಫ್.ಐ.ಆರ್. ದಾಖಲಿಸಿದೆ. ವರದಿಗಾರ್ತಿ ರಚನಾ ಕೈರಾ 6 ತಿಂಗಳ ಕಾಲ ತನಿಖೆ ನಡೆಸಿ ದೇಶದ ಕೋಟ್ಯಂತರ ಭಾರತೀಯರ ಆಧಾರ್ ಮಾಹಿತಿ ಸೋರಿಕೆಯಾಗುತ್ತಿರುವ ಕುರಿತು ವರದಿ ಪ್ರಕಟಿಸಿದ್ದರು.

# ರಾಜಕೀಯ ನಿಧಿಯ ಶುದ್ಧೀಕರಣ ಪ್ರಸ್ತಾಪ

**ನವದೆಹಲಿ**

ರಾಜಕೀಯ ಪಕ್ಷಗಳ ನಿಧಿಯನ್ನು ಇನ್ನಷ್ಟು ಶುದ್ಧ ಹಾಗೂ ಪಾರದರ್ಶಕವಾಗಿಸುವ ನಿಟ್ಟಿನಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ ಎಂದು ಕೇಂದ್ರ ಹಣಕಾಸು ಸಚಿವ ಅರುಣ್ ಜೇಟ್ಲಿ ಹೇಳಿದ್ದಾರೆ. ರಾಜಕೀಯ ವ್ಯವಸ್ಥೆಯಲ್ಲಿ ಧನ ಸಹಾಯ ಮಾಡುವ ಸಾಂಪ್ರದಾಯಿಕ ಅಭ್ಯಾಸವು ದೇಣಿಗೆಗಳನ್ನು ತೆಗೆದುಕೊಳ್ಳುವುದು ಮತ್ತು ಖರ್ಚುಗಳನ್ನು ನಡೆಸುವುದು ಎಂದಾಗಿದೆ ಎಂದವರು ತಿಳಿಸಿದ್ದಾರೆ.



# ಸೌದಿಯಲ್ಲಿ 11 ರಾಜಕುಮಾರರ ಬಂಧನ

**ರಿಯಾದ್**

ಸೌದಿ ಅರೇಬಿಯಾ ಸರ್ಕಾರದ ಮಿತವ್ಯಯ ಕ್ರಮಗಳನ್ನು ಖಂಡಿಸಿ ಪ್ರತಿಭಟನೆ ನಡೆಸಲು ರಿಯಾದ್ ನಲ್ಲಿನ ಅರಮನೆಯಲ್ಲಿ ಸೇರಿದ್ದ 11 ರಾಜಕುಮಾರರನ್ನು ಬಂಧಿಸಿರುವ ವಿಚಾರವನ್ನು ಅಟಾರ್ನಿ ಜನರಲ್ ಸ್ಪಷ್ಟಪಡಿಸಿದ್ದಾರೆ. ರಾಜ ಕುಟುಂಬ ಪರಿವಾರದ ನೀರು ಹಾಗೂ ವಿದ್ಯುತ್ ಬಿಲ್‌ಗಳನ್ನು ಸರ್ಕಾರ ಪಾವತಿಸುವುದನ್ನು ನಿಲ್ಲಿಸುವ ಕ್ರಮ ಸೇರಿದಂತೆ ಇತರೆ ಕ್ರಮಗಳನ್ನು ವಿರೋಧಿಸಿ ರಾಜಕುಮಾರರು ಪ್ರತಿಭಟನೆಗೆ ಸಜ್ಜಾಗಿದ್ದರು.

# 1214 ಅಭ್ಯರ್ಥಿಗಳು ಉದ್ಯೋಗಕ್ಕೆ ಆಯ್ಕೆ

## ಎರಡು ದಿನಗಳ ಕೌಶಲ್ಯ-ಉದ್ಯೋಗ ಮೇಳದ ಮುಕ್ತಾಯ



**ತುಮಕೂರು**

ರಾಜ್ಯಮಟ್ಟದಲ್ಲಿ ನಿರುದ್ಯೋಗಿಗಳಿಗಾಗಿ ಕೌಶಲ್ಯಾಭಿವೃದ್ಧಿಯನ್ನು ಹೆಚ್ಚಿಸಲು ಹಮ್ಮಿಕೊಂಡಿದ್ದ ಕೌಶಲ್ಯ ಹಾಗೂ ಬೃಹತ್ ಉದ್ಯೋಗ ಮೇಳ ಯಶಸ್ವಿಯಾಗಿ ನಡೆದಿದೆ ಎಂದು ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಮುರಳಿಧರ್ ಹಾಲಪ್ಪ ಹೇಳಿದರು.

ನಗರದ ಸರಕಾರಿ ಜೂನಿಯರ್ ಕಾಲೇಜು ಮೈದಾನದಲ್ಲಿ ರಾಜ್ಯ ಕೌಶಲ್ಯಾಭಿವೃದ್ಧಿ ನಿಗಮ ಮತ್ತು ಜಿಲ್ಲಾಡಳಿತದ ಸಹಯೋಗದೊಂದಿಗೆ ಹಮ್ಮಿಕೊಂಡಿದ್ದ ಎರಡು ದಿನಗಳ ಕೌಶಲ ಹಾಗೂ ಬೃಹತ್ ಉದ್ಯೋಗ ಮೇಳದ ಮುಕ್ತಾಯ ಸಮಾರಂಭದ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಿರುದ್ಯೋಗಿ ಯುವಕ-ಯುವತಿಯರಿಗೆ ಉದ್ಯೋಗ ಕಲ್ಪಿಸುವ ನಿಟ್ಟಿನಲ್ಲಿ ಹಮ್ಮಿಕೊಂಡಿದ್ದ ರಾಜ್ಯ ಮಟ್ಟದ ಕೌಶಲ ಮತ್ತು ಬೃಹತ್ ಉದ್ಯೋಗ ಮೇಳ ಯಶಸ್ವಿಯಾಗಿ ನಡೆದಿದೆ ಎಂದರು.

ನ.6.7ರಂದು ಹಮ್ಮಿಕೊಂಡಿದ್ದ ಉದ್ಯೋಗ ಮೇಳಕ್ಕೆ ರಾಜ್ಯದ 146 ಕಂಪನಿಗಳು ಭಾಗವಹಿಸಿದ್ದವು,10566 ಯುವಕ-ಯುವತಿಯರು ಉದ್ಯೋಗಕ್ಕಾಗಿ ನೋಂದಣಿ ಮಾಡಿಕೊಂಡಿದ್ದರು.ಇದರಲ್ಲಿ 5160 ಶಾರ್ಟ್‌ಲಿಸ್ಟ್ ಅಭ್ಯರ್ಥಿಗಳಿದ್ದು,477 ಅಭ್ಯರ್ಥಿಗಳಿಗೆ ಸ್ಥಳದಲ್ಲೇ ಕಂಪನಿಗೆ ನೇಮಕ ಮಾಡಿಕೊಂಡಿದ್ದಾರೆ.3858 ಯುವಕ-ಯುವತಿಯರು ಕೌಶಲ್ಯ ಮೇಳಕ್ಕೆ ಆಯ್ಕೆಯಾಗಿದ್ದು,1214 ಅಭ್ಯರ್ಥಿಗಳು ಸ್ವ ಉದ್ಯೋಗಕ್ಕೆ ಮಾಡಲು ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

ರಾಜ್ಯಮಟ್ಟದಲ್ಲಿ ಮಾಡುವಂತಹ ಕೌಶಲ ಮೇಳ ಹಾಗೂ ಉದ್ಯೋಗ ಮೇಳದಿಂದ ನಿರುದ್ಯೋಗಿ ಯುವಕ-ಯುವತಿಯರಿಗೆ ಮತ್ತು ವಿದ್ಯಾರ್ಥಿಗಳಿಗೆ ಉದ್ಯೋಗ ಸಿಗಲು ಹಾಗೂ ತರಬೇತಿಗಳ ಮುಖಾಂತರ ಸ್ವ ಉದ್ಯೋಗ ಮಾಡಲು ಸಹಕಾರಿಯಾಗಿದೆ.ರಾಜ್ಯದ ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪಿಸಲು ರಾಜ್ಯ ಕೌಶಲ್ಯ ಅಭಿವೃದ್ಧಿ ನಿಗಮದ ವತಿಯಿಂದ ಹಮ್ಮಿಕೊಂಡಿರುವ ಬೃಹತ್ ಮಟ್ಟದ ಯೋಜನೆ >>> 7ನೇ ಪುಟಕ್ಕೆ

# ಎಲ್ಲರ ಮನಸ್ಸನ್ನೂ ಸೆಳೆಯುವ ಸಾಧನ ಸಂಗೀತ

## ನಗರದಲ್ಲಿ ರಜತ ಸಂಗೀತ ವಿದ್ವಾಂಸ ಸಮ್ಮೇಳನ-ಯುವ ಸಂಗೀತೋತ್ಸವ ಉದ್ಘಾಟನೆ



ರಾಘವೇಂದ್ರ ಸಂಗೀತ ಸಭಾ ರಜತ ಮಹೋತ್ಸವ, ಹಿರಿಯ ಸಂಗೀತ ವಿದ್ವಾಂಸರ ಸಮ್ಮೇಳನ ನಗರದ ಶಂಕರ ಮಠದಲ್ಲಿ ನೆರವೇರಿತು. ಇದರ ಮುಕ್ತಾಯ ಸಮಾರಂಭದಲ್ಲಿ ನಾದಸಂಪದ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಾಯಿತು. ಶ್ರೀ ವೀರೇಶಾನಂದ ಸರಸ್ವತಿ ಸ್ವಾಮಿಗಳು, ಸುಧಾಪ್ರಸಾದ್, ಸಮ್ಮೇಳನಾಧ್ಯಕ್ಷ ಆರ್.ಕೆ.ಪದ್ಮನಾಭ, ಡಿ.ಆರ್.ಸುಬ್ರಹ್ಮಣ್ಯ, ಜೆ.ಶಲ್ಲಕೃಷ್ಣ, ಜೆ.ವಿ.ವಿದ್ಯಾಶಂಕರ್, ಎನ್.ಶಂಕರ್ ಇತರರಿದ್ದರು.

**ತುಮಕೂರು**

ಯಾವುದೇ ಜಾತಿ, ಧರ್ಮ, ಜನಾಂಗ, ಲಿಂಗಬೇಧ, ಪ್ರಾದೇಶಿಕ ತಾರತಮ್ಯ, ಭಾಷೆ ಎಂಬ ಭೇದಭಾವವಿಲ್ಲದೆ ಎಲ್ಲರ ಮನಸ್ಸನ್ನೂ ಸೆಳೆಯುವ ಏಕೈಕ ಸಾಧನ ಸಂಗೀತ ಎಂದು ಜಿಲ್ಲಾ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಬಾ.ಹ.ರಮಾಕುಮಾರಿ ಅಭಿಪ್ರಾಯಪಟ್ಟರು.

ನಗರದ ಶ್ರೀ ಶೃಂಗೇರಿ ಶಂಕರ ಮಠದಲ್ಲಿ ನಡೆದ ಶ್ರೀ ರಾಘವೇಂದ್ರ ಸಂಗೀತ ಸಭಾ ವತಿಯಿಂದ ಆಯೋಜಿಸಿದ್ದ ರಜತ ಮಹೋತ್ಸವದ ಪ್ರಯುಕ್ತ ಹಿರಿಯ ಸಂಗೀತ ವಿದ್ವಾಂಸರ ಸಮ್ಮೇಳನ ಹಾಗೂ ಯುವ ಸಂಗೀತೋತ್ಸವ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ನಮ್ಮ ತುಮಕೂರು ನಗರವೂ ಸಹ ಸಂಗೀತಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ನೀಡುತ್ತಿದ್ದು ಇದನ್ನು ನಮ್ಮ ಕನ್ನಡ ಸಾಹಿತ್ಯ ಪರಿಷತ್ತು ಸಹ ಪರಿಗಣನೆಗೆ ತೆಗೆದುಕೊಂಡಿದೆ ಎಂದರು. ಈ ಸಂಸ್ಥೆ ಐದು ದಿನಗಳ ಕಾಲ ಶಿಸ್ತುಬದ್ದವಾಗಿ ನಡೆಸಿದ ಸಂಗೀತ ಸಮ್ಮೇಳನಗಳು ಸಂಗೀತ ಸಹೃದಯರಿಗೆ ಸಂತೋಷವನ್ನುಂಟು ಮಾಡಿದೆ.

ಶಿಲ್ಪಕಲೆ, ಚಿತ್ರಕಲೆ, ಸಂಗೀತ, ನೃತ್ಯ, ನಾಟಕ ಇವು ಕಲಾ ಮಾಧ್ಯಮದಲ್ಲಿ ಪಂಚಶೀಲ ತತ್ವಗಳಾಗಿವೆ, ಇದರಲ್ಲಿ ಸಂಗೀತವು ಬಹಳ ವಿಶಿಷ್ಟವಾಗಿದ್ದು ಮನುಷ್ಯನಲ್ಲದೆ ಪ್ರಾಣಿ, ಪಕ್ಷಿಗಳೂ ಸಹ ಸಂಗೀತಕ್ಕೆ ತಲೆ ದೂಗುತ್ತವೆ ಎಂಬುದು ವೈಜ್ಞಾನಿಕವಾಗಿ ಸಾಬೀತಾಗಿದ್ದು ಸಂಗೀತದಲ್ಲಿರು ಮಡಿವಂತಿಕೆಯನ್ನು ಬಿಡುವ ಮೂಲಕ ಯುವ ಜನರು ಶಾಸ್ತ್ರೀಯ ಸಂಗೀತಕ್ಕೆ ಆಧುನಿಕ ಸ್ಪರ್ಷವನ್ನು ನೀಡಿ ಸಂಗೀತವನ್ನು ಬೆಳೆಸುತ್ತಿದ್ದಾರೆ ಅವರನ್ನು ಪ್ರೋತ್ಸಾಹಿಸುವುದು >>> 7ನೇ ಪುಟಕ್ಕೆ

# ವರ್ಷ ಕಳೆದರೂ ಫಲಾನುಭವಿಗಳ ಆಯ್ಕೆಯಾಗಿಲ್ಲ..!!

## ಮೀನುಗಾರಿಕೆ ಇಲಾಖೆಯ ಪ್ರಗತಿಗೆ ಅನುದಾನದ ಕೊರತೆಯೇ ಅಡ್ಡಗಾಲು..!!

■ ಭೂಷಣ್ ಮಿಡಿಗೇಶಿ

**ತುಮಕೂರು**

ಈ ವರ್ಷ ಉತ್ತಮ ಮಳೆಯಾಗಿ ಕಳೆದ ದಶಕಗಳಿಂದ ನೀರು ನೋಡದ ಕೆರೆಕುಂಟೆಗಳು ಸಾಕಷ್ಟು ಕಡೆ ಭರ್ತಿಯಾಗಿ ಜಿಲ್ಲೆಯ ಜನ ಈ ಬಾರಿ ಮೀನು ಸವಿಯಲು ಸಿದ್ಧರಾಗಿದ್ದಾರೆ.ದುರದೃಷ್ಟವೆಂಬಂತೆ ಸದರಿ ಮೀನುಗಾರಿಕೆ ಇಲಾಖೆಗೆ ರಾಜ್ಯವಲಯದಿಂದ ಬರಬೇಕಾಗಿದ್ದ ಹಣ ಬಿಡುಗಡೆಯಾಗದೆ ಪ್ರಗತಿ ತೀವ್ರತರವಾಗಿ ಕುಂಠಿತವಾಗಿದೆ.ಫಲಾನುಭವಿಗಳ ಆಯ್ಕೆಯು ಇನ್ನೂ ನಡೆಯದೆ ಬರೀ ಕ್ರಿಯಾಯೋಜನೆ ತಯಾರು ಮಾಡಿ ತೆಪ್ಪಗಾಗುವ ಪರಿಸ್ಥಿತಿಯಿದೆ.

**ಯಾವುದಕ್ಕೆ ಅನುದಾನದ ಕೊರತೆ..??**

ಮೀನುಗಾರಿಕೆ ಇಲಾಖೆಯ ವತಿಯಿಂದ ನೀಡಲಾಗುವ ಸಲಕರಣೆ ಕಿಟ್ಟುಗಳ ವಿತರಣೆಗೆಂದು ಎರಡು ಲಕ್ಷ ರೂಪಾಯಿಗಳ ಅನುದಾನ ರಾಜ್ಯ ವಲಯದಿಂದ ಬರಬೇಕಾಗಿತ್ತು. ಆದರೆ ಇಲ್ಲಿಯತನಕ ಯಾವುದೇ ಅನುದಾನ ಬಾರದೆ 20 ಮಂದಿ ಫಲಾನುಭವಿಗಳು ಆಯ್ಕೆಯಾಗಿ ಸವಲತ್ತು ಸಿಗದೆ ಕೈಚೆಲ್ಲಿ ಕುಳಿತುಕೊಳ್ಳುವಂತಾಗಿದೆ.ಇದೇ ರೀತಿಯಾಗಿ ಫೈಬರ್ ಗ್ಲಾಸಿನ ಹರಿಗೋಲು ವಿತರಣೆಗಾಗಿ 15 ಫಲಾನುಭವಿಗಳನ್ನು ಆಯ್ಕೆ ಮಾಡಲಾಗಿದೆ. ಇವರಿಗೂ ಕೂಡ ಹರಿಗೋಲು ವಿತರಿಸದೆ ಕೇವಲ ಕಾಗದದ ಮೇಲೆ ಮಾತ್ರ ಕಾರ್ಯಕ್ರಮ ನಡೆದಿದೆ.

ಮೀನುಮರಿ ಖರೀದಿಗೆಂದು 1.80 ಲಕ್ಷ ರೂಪಾಯಿಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿದೆ.ಇದಕ್ಕೆ ಬೇಕಾಗಿರುವ ಅನುದಾನದ ಮೊತ್ತವನ್ನು ರಾಜ್ಯ ವಲಯದಿಂದ ಬಿಡುಗಡೆ ಮಾಡಬೇಕಾಗಿತ್ತು.ಈ ಮೊತ್ತದಲ್ಲಿ ಕೇವಲ 30 ಸಾವಿರ ರೂಪಾಯಿಗಳನ್ನು ಮಾತ್ರ ಬಿಡುಗಡೆ ಮಾಡಿ ಸುಮ್ಮನಾಗಿರುವುದರಿಂದ 18 ಮಂದಿ ಫಲಾನುಭವಿಗಳ ಆಯ್ಕೆ ಮಾಡಲಾಗಿದೆ. ಇಲ್ಲಿಯವರೆಗೂ ಎರಡನೇ ಕಂತಿನ ಹಣ ಬಿಡುಗಡೆಯಾಗದೆ ಕಾರ್ಯಕ್ರಮ ನಿಂತು



ಹೋಗಿದೆ.ಶೇಕಡಾ 21 ರಷ್ಟು ಪ್ರಗತಿ ಸಾಧಿಸಿದ ಇಲಾಖೆ ಸುಮ್ಮನಾಗಿದೆ.

ಮೀನುಗಾರಿಕೆ ಕುರಿತ ವಸ್ತು ಪ್ರದರ್ಶನ ಮತ್ತು ತರಬೇತಿಗೆಂದು 40 ಸಾವಿರ ರೂಪಾಯಿಗಳ ಅನುದಾನಕ್ಕೆ ರಾಜ್ಯವಲಯಕ್ಕೆ ಬೇಡಿಕೆ ಸಲ್ಲಿಸಲಾಗಿದೆ.ಇದರಲ್ಲಿ ಅರ್ಧದಷ್ಟು ಅನುದಾನವನ್ನು ಮಾತ್ರ ಕೊಟ್ಟು ಉಳಿದ 20ಸಾವಿರ ರೂಪಾಯಿಗಳ ಅನುದಾನಕ್ಕೆ ಕತ್ತರಿ ಹಾಕಲಾಗಿದೆ.ಅತ್ಯಂತ ಕಡಿಮೆ ಅನುದಾನವಿದ್ದರೂ ಕಾರ್ಯಕ್ರಮಗಳ ಪ್ರಾಮುಖ್ಯತೆಯನ್ನು ಗಣನೆಗೆ ತೆಗೆದುಕೊಂಡು

> ಜಿಲ್ಲಾವಲಯದ ಕಾರ್ಯಕ್ರಮಗಳಡಿಯಲ್ಲಿ ವಸ್ತು ಪ್ರದರ್ಶನ ಮತ್ತು ತರಬೇತಿಗೆಂದು 4.30 ಲಕ್ಷ ರೂಪಾಯಿಗಳ ಅನುದಾನವನ್ನು ಇಲಾಖೆಗೆ ನೀಡಲಾಗಿದೆ. ಇದರಲ್ಲಿ 4 ಕಾರ್ಯಕ್ರಮಗಳನ್ನು ಆಯೋಜಿಸಬೇಕೆಂಬ ಗುರಿ ನಿಗದಿಪಡಿಸಲಾಗಿದೆ. ಇದಕ್ಕೆ ಸಂಬಂಧಪಟ್ಟಂತೆ ಪ್ರಗತಿ ತೃಪ್ತಿಕರವಾಗಿಲ್ಲದೆ ಇರುವುದು ಕಂಡುಬರುತ್ತದೆ.ಕೇವಲ 6% ಪ್ರಗತಿಯನ್ನು ಇಲ್ಲಿಯತನಕ ಸಾಧಿಸಲಾಗಿದೆ.

ಅನುದಾನ ಬಿಡುಗಡೆ ಮಾಡಿದರೆ ಇಂತಹ ಇಲಾಖೆಗಳು ಆರ್ಥಿಕ ಸಂಕಷ್ಟವನ್ನು ಎದುರಿಸದೆ ಪ್ರಗತಿ ಸಾಧಿಸಲು ಸಾಧ್ಯವಾಗುತ್ತದೆ.

ಕೇಂದ್ರ ಸರ್ಕಾರದ ಬಹುನಿರೀಕ್ಷಿತ ಮಹಾತ್ವಾಕಾಂಕ್ಷಿ ಯೋಜನೆಗಳಲ್ಲಿ ಒಂದಾದ ರಾಷ್ಟ್ರೀಯ ಕೃಷಿ ಸಿಂಚಾಯಿ ಯೋಜನೆಯಅಡಿಯಲ್ಲಿ 33 ಜನ ಫಲಾನುಭವಿಗಳಿಗೆ ಸಲಕರಣೆಯ ಕಿಟ್ಟುಗಳ ವಿತರಣೆಗೆ ಕ್ರಿಯಾ ಯೋಜನೆ ಹಾಕಿಕೊಳ್ಳಲಾಗಿದೆ. ಇದಕ್ಕೆ ಒಂದು ಘಟಕಕ್ಕೆ 10 ಸಾವಿರದಂತೆ 3.30 ಲಕ್ಷ ರೂಗಳ ಅನುದಾನದ ಬೇಡಿಕೆ ಇದೆ. ಆದರೆ ಕೇವಲ 90 ಸಾವಿರ ಅನುದಾನವನ್ನು >>> 7ನೇ ಪುಟಕ್ಕೆ



ತುಮಕೂರು ತಾಲ್ಲೂಕು ಹೆಬ್ಬೂರು ಹೋಬಳಿ ಶ್ರೀ ಚಿಕ್ಕಣ್ಣಸ್ವಾಮಿ ಕ್ಷೇತ್ರದ ಧರ್ಮದರ್ಶಿ ಪಾಪಣ್ಣ ಅವರ 44ನೇ ವರ್ಷದ ಗುವಂದನಾ ಕಾರ್ಯಕ್ರಮ ಶನಿವಾರ ರಾತ್ರಿ ನೆರವೇರಿತು. ವಿವಿಧ ಮಠಾಧೀಶರು, ರಾಜಕಾರಣಿಗಳು, ಸಂಘಸಂಸ್ಥೆಗಳ ಪ್ರತಿನಿಧಿಗಳು ಈ ಸಮಾರಂಭದಲ್ಲಿ ಭಾಗಹಿಸಿದ್ದರು.

SBI ಭಾರತೀಯ ಸ್ಟೇಟ್ ಬ್ಯಾಂಕ್
ಸುಸ್ತಿದಾರ ರೈತ ಬಾಂಧವರಿಗೆ ಸುವರ್ಣಾವಕಾಶ
50%
ರಷ್ಟು ರಿಯಾಯಿತಿ
ಪಡೆದು ಸಾಲದಿಂದ ಋಣಮುಕ್ತರಾಗಿರಿ
ಈ ಸುವರ್ಣಾವಕಾಶ 31-1-2018 ವರೆಗೆ ಮಾತ್ರ
ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಭಾರತೀಯ ಸ್ಟೇಟ್ ಬ್ಯಾಂಕ್ ಶಾಖೆಯನ್ನು ಸಂಪರ್ಕಿಸಿ